# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಅವಶ್ಯವಿರುವ ಹೆಚ್ಚುವರಿ ಅನುದಾನವನ್ನು ಪುನರ್‌ವಿನಿಯೋಗದಿಂದ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/75/ಮೀಇಯೋ/2015, ದಿನಾಂಕ: 04-05-2015.

(2) ಪತ್ರ ಸಂಖ್ಯೆ: ಮೀನಿ/87/ಪಂವಾಯೋ(1)/2015, ದಿನಾಂಕ: 23-01-2016.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ನೆರವು ಎಂಬ ಯೋಜನೆಯನ್ನು 2015-16ನೇ ಸಾಲಿನಲ್ಲಿ ಮುಂದುವರೆಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ಸದರಿ ಯೋಜನೆಯಡಿ 2015-16ನೇ ಸಾಲಿನ ಲೆಕ್ಕ ಶೀರ್ಷಿಕೆಯಡಿ ರೂ.30.00 ಲಕ್ಷ ಅನುದಾನ ಒದಗಿಸಿದ್ದು, ಇದರಲ್ಲಿ ರೂ.29.82 ಲಕ್ಷಗಳನ್ನು ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿದೆ. ಈ ಯೋಜನೆಗೆ ಹೆಚ್ಚುವರಿಯಾಗಿ ರೂ.12.38 ಲಕ್ಷ ಅನುದಾನದ ಅವಶ್ಯಕತೆ ಇರುತ್ತದೆ. ಆದ್ದರಿಂದ, 2015-16ನೇ ಸಾಲಿನ ಲೆಕ್ಕ ಶೀರ್ಷಿಕೆ 2405-00-109-0-01-ಸಂಶೋಧನೆ, ವಿಸ್ತರಣೆ, ವಸ್ತುಪ್ರದರ್ಶನ ಮತ್ತು ತರಬೇತಿ-051-ಸಾಮಾನ್ಯ ವೆಚ್ಚಗಳಡಿ ಉಳಿತಾಯವಾಗುವ ಮೊತ್ತದಿಂದ ರೂ.12.38 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2405-00-105-0-09-ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ನೆರವು-106-ಸಹಾಯ ಧನ (ಯೋಜನೆ) ಅಡಿ ಪುನರ್‌ವಿನಿಯೋಗ ಮಾಡಿ ಬಿಡುಗಡೆಗೊಳಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 33 ಮೀಇಯೋ 2016, ಬೆಂಗಳೂರು ದಿನಾಂಕ: 23-02-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನಲ್ಲಿ ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ನೆರವು ಎಂಬ ಯೋಜನೆಗೆ ಅವಶ್ಯವಿರುವ ಹೆಚ್ಚುವರಿ

ಅನುದಾನ ರೂ.12.38 ಲಕ್ಷ (ಹನ್ನೆರಡು ಲಕ್ಷದ ಮೂವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-109-ವಿಸ್ತರಣೆ ಮತ್ತು ತರಬೇತಿ-0-01-ಸಂಶೋಧನೆ, ವಿಸ್ತರಣೆ, ವಸ್ತುಪ್ರದರ್ಶನ ಮತ್ತು ತರಬೇತಿ-051-ಸಾಮಾನ್ಯ ವೆಚ್ಚಗಳು ಇಂದ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-105-ಸಂಸ್ಕರಣ, ಸಂರಕ್ಷಣೆ ಮತ್ತು ಮಾರುಕಟ್ಟೆ-0-09-ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ನೆರವು-106-ಸಹಾಯಧನ (ಯೋಜನೆ)ಗೆ ಈ ಆದೇಶದ <u>**ಅನುಬಂಧ**</u>ದಲ್ಲಿ ವಿವರಿಸಿರುವಂತೆ ಪುನರ್ವಿನಿಯೋಗ ಮಾಡಿ, ಬಿಡುಗಡೆಗೊಳಿಸಲಾಗಿದೆ.

ಈ ಆದೇಶವನ್ನು ಆದೇಶ ಸಂಖ್ಯೆ: ಎಫ್‌ಡಿ/11/ಟಿಎಫ್‌ಪಿ/2007, ದಿ: 27-11-2007 ರಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5) ಮೀನುಗಾರಿಕೆ ಉಪ ನಿರ್ದೇಶಕರು, ಮೈಸೂರು.
6) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ,
8) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು/ ಸಮನ್ವಯ-ಕಂಪೆಂಡಿಯಂ.

ಆದೇಶ ಸಂಖ್ಯೆ:ಪಸಂಮೀ/33/ಮೀಇಯೋ/2016, ಬೆಂಗಳೂರು, ದಿನಾಂಕ: 23-02-2016ರ

## ಅನುಬಂಧ

(ರೂ.ಲಕ್ಷಗಳಲ್ಲಿ)

ಆಯವ್ಯಯ ಪತ್ರದಲ್ಲಿ ಅಥವಾ ಹೆಚ್ಚಿನ (ಅಲಾಟ್ ಮೆಂಟ್) ಕಲ್ಪಿಸಿಲ್ಲದ ಎಲ್ಲಾ ವಿನಿಯೋಗಗಳಿಗೆ ಅಥವಾ ಮಂಜೂರಾತಿಗೆ ಲಗತ್ತಿಸ ಬೇಕಾದ ಮರುವಿನಿಯೋಗ ವಿವರಣೆ

| ಕ್ರ. ಸಂ. | ಮುಂಗಡ ಪತ್ರದ ಪ್ರಧಾನ ಲೆಕ್ಕ ಶೀರ್ಷಿಕೆ ಉಪ ಮತ್ತು ವಿವರವಾದ ಶೀರ್ಷಿಕೆಗಳು | ಹೆಚ್ಚಿಸಲು ಪ್ರಸ್ತಾಪಿಸಲಾದ ಅಂದಾಜಿನ ಶೀರ್ಷಿಕೆ | | | | ಕಡಿಮೆ ಮಾಡಲು ಪ್ರಸ್ತಾಪಿಸಲಾದ ಅಂದಾಜಿನ ಶೀರ್ಷಿಕೆ | | | | ಹೆಚ್ಚಿನ ಅಥವಾ ಉಳಿತಾಯಕ್ಕೆ ಕಾರಣ ವಿವರಿಸಬೇಕು |
|---|---|---|---|---|---|---|---|---|---|---|
| | | ಮಂಜೂರಾದ ಆಯವ್ಯಯ ಅಂದಾಜಿನಲ್ಲಿ ರುವ ಮೊತ್ತ | ಇದುವರೆಗೆ ಆಗಿರುವ ವಾಸ್ತವಿಕ ವೆಚ್ಚ * | ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ | ಬೇಕಾದ ಹೆಚ್ಚಿನ ಅಲಾಟ್ ಮೆಂಟ್ ವಿವರ | ಪರಿಷ್ಕೃತ ಅಂದಾಜಿನಲ್ಲಿ ರುವ ಮೊತ್ತ (ರಾಜ್ಯದ ಪಾಲು) | ಇದುವರೆಗೆ ಆಗಿರುವ ವಾಸ್ತವಿಕ ವೆಚ್ಚ | ವರ್ಷದ ಉಳಿದ ಅವಧಿಯಲ್ಲಿ ಸಂಭವ ನೀಯ ವೆಚ್ಚ | ಮರುವಿನಿ ಯೋಗ ಮಾಡಲಾದ ಮೊತ್ತ | |
| | 1 | 2 | 3 | 4 | 5 | 6 | 7 | 8 | 9 | 10 |
| 1 | 2405-ಮೀನುಗಾರಿಕೆ - 00 -105-ಸಂಸ್ಕರಣ, ಸಂರಕ್ಷಣೆ ಮತ್ತು ಮಾರುಕಟ್ಟೆ-0-09-ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ನೆರವು-106-ಸಹಾಯಧನ (ಯೋಜನೆ) | 30 | 14.81 | 27.57 | 12.38 | | | | | 2015-16ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕು ಸುಳ್ಯದಲ್ಲಿ, ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ದೇವರಾಜ ಮತ್ತು ಎನ್.ಆರ್.ಮೊಹಲ್ಲಾಗಳಲ್ಲಿ ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುತ್ತದೆ. |
| | ಒಟ್ಟು | 30 | 14.81 | 27.57 | 12.38 | | | | | |
| 2 | 2405-ಮೀನುಗಾರಿಕೆ - 00-109-ವಿಸ್ತರಣೆ ಮತ್ತು ತರಬೇತಿ-0-01-ಸಂಶೋಧನೆ, ವಿಸ್ತರಣೆ, ವಸ್ತುಪ್ರದರ್ಶನ ಮತ್ತು ತರಬೇತಿ-051-ಸಾಮಾನ್ಯ ವೆಚ್ಚಗಳು (ಯೋಜನೆ) | | | | | 284.00 | 114.37 | 157.25 | 12.38 | ಸದರಿ ಯೋಜನೆಯಡಿ ವಿವಿಧ ವಿಸ್ತರಣಾ ಚಟುವಟಿಕೆಗಳು, ತರಬೇತಿ, ಮತ್ಸ್ಯಮೇಳ ನಡೆಸುವುದು, ರೋಗಪತ್ತೆ ವಾಹನ ಖರೀದಿ ಹಾಗೂ ಸಂಶೋಧನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ ನಂತರ ಅನುದಾನ ಉಳಿತಾಯವಾಗುತ್ತದೆ. |
| | ಒಟ್ಟು | | | | | 284.00 | 114.37 | 157.25 | 12.38 | |

23/2/16

(ರಶ್ಮಿ ಶಿವಶಂಕರ ಮೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)